<u>ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

**<u>Spl NDPS 2/2022</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಗಿರೀಶ್ ಬಿ.ವಿ | ಪಿ.ಡಬ್ಲ್ಯೂ. | 1 |
| ತಂದೆಯ ಹೆಸರು | ಃ ವೀರಭದ್ರಪ್ಪ | ಸಿ.ಡಬ್ಲ್ಯೂ. | 1 |
| ವಯಸ್ಸು | ಃ 43 ವರ್ಷ | | |
| ಉದ್ಯೋಗ | ಃ ಸಿಪಿಐ ತರಿಕೇರೆ ಗ್ರಾಮಾಂತರ ಪೋಲೀಸ ಠಾಣೆ ಚಿಕ್ಕಮಗಳೂರು ಜಿಲ್ಲೆ. | | |
| ವಾಸ ಸ್ಥಳ | ಃ ತರಿಕೇರೆ, ಚಿಕ್ಕಮಗಳೂರು ಜಿಲ್ಲೆ. | | |

ದಿ.04.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ **(ಮಂಜುನಾಥ ಬಿ)**</u> ಃ

1. ನಾನು ನವೆಂಬರ್ 2020 ರಿಂದ ಡಿಸೆಂಬರ್ 2021 ರವರೆಗೆ ಸಿಇಎನ್ ಪೋಲೀಸ್ ಠಾಣೆ ದಾವಣಗೆರೆಯಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 05.07.2021 ರಂದು ಮಧ್ಯಾಹ್ನ 02.00 ಗಂಟೆಗೆ ನಾನು ಠಾಣೆಯಲ್ಲಿರುವಾಗ ತುಂಗಭದ್ರಾ ಬಡಾವಣೆಯ ಕಮಾನ್ ಹತ್ತಿರ ಅಕ್ರಮವಾಗಿ ಗಾಂಜಾ ಮಾರಾಟ ಮಾಡುವ ಬಗ್ಗೆ ಖಚಿತ ಮಾಹಿತಿ ಬಂದಿದ್ದರ ಮೇರೆಗೆ ಈ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಿ ಮಾಹಿತಿಯನ್ನು ಮೇಲಾಧಿಕಾರಿಗೆ ತಿಳಿಸಿ ಅನುಮತಿಯನ್ನು ಪಡೆದು ನಂತರ ಮುಂದಿನ ಕ್ರಮದ ಬಗ್ಗೆ ಪಂಚರಾಗಲು ಅಭಕಾರಿ ನಿರಿಕ್ಷಕರು ದಾವಣಗೆರೆ ಇವರಿಗೆ ಇವರಿಗೆ ಇಬ್ಬರು ಪಂಚರನ್ನು ನೇಮಕ ಮಾಡಿಕೊಡುವಂತೆ ಕೊರಿಕೆ ಪತ್ರವನ್ನು ಕೊಟ್ಟಿರುತ್ತೇನೆ. ಹಾಗೂ ಪತ್ರಾಂಕಿತ ಅಧಿಕಾರಿಯಾಗಿ ಬರಲು ಡಿವೈಎಸ್‌ಪಿ ಡಿಸಿಆರ್ ಬಿ

ರವರಿಗೆ ಮನವಿ ಪತ್ರವನ್ನು ಕಳುಹಿಸಿಕೊಟ್ಟಿರುತ್ತೇನೆ. ಅಭಕಾರಿ ನಿರಿಕ್ಷಕರಿಗೆ ನೀಡಿದ ಕೋರಿಕೆ ಪತ್ರವನ್ನು ನಿಪಿ.**1** ಎಂದು ಗುರುತಿಸಲಾಯಿತು. ಡಿವೈಎಸ್‌ಪಿ ಡಿಸಿಆರ್ ಬಿ ರವರಿಗೆ ನೀಡಿದ ಮನವಿ ಪತ್ರವನ್ನು ನಿಪಿ.**2** ಎಂದು ಗುರುತಿಸಲಾಯಿತು. ಎಸ್.ಪಿ ರವರಿಗೆ ಬರೆದ ಪತ್ರ ನಿಪಿ.**3** ಎಂದು ಗುರುತಿಸಲಾಯಿತು.

3. ನಂತರ ಮಧ್ಯಾಹ್ನ 02.40 ಗಂಟೆಗೆ ಪತ್ರಾಂಕಿತ ಅಧಿಕಾರಿ ಚಾಸಾ.4 ರವರು, ಪಂಚರಾದ ಚಾಸಾ.2 ಮತ್ತು ಚಾಸಾ.3 ರವರು ಠಾಣೆಗೆ ಬಂದಿದ್ದು, ಠಾಣೆಯಲ್ಲಿ ಪಂಚರನ್ನು ದಾಳಿ ಬಗ್ಗೆ ಮಾಹಿತಿಯನ್ನು ತಿಳಿಸಿ ಪಂಚರಾಗಿ ಒಪ್ಪಲು ತಿಳಿಸಿದ ಮೇರೆಗೆ ಮತ್ತು ಪತ್ರಾಂಕಿತ ಅಧಿಕಾರಿಯ ಬಗ್ಗೆ ಅವರಿಗೆ ತಿಳಿಸಿ, ಚಾಸಾ.2 ಮತ್ತು ಚಾಸಾ.3 ರವರಿಗೆ ನೋಟೀಸ್ ಜಾರಿ ಮಾಡಿರುತ್ತೇನೆ. ಸದರಿ ನೋಟೀಸಗಳನ್ನು ನಿಪಿ.**4** ಮತ್ತು ನಿಪಿ.**5** ಎಂದು ಕ್ರಮವಾಗಿ ಗುರುತಿಸಲಾಯಿತು.

4.ನಂತರ ಮಧ್ಯಾಹ್ನ 03.00 ಗಂಟೆಗೆ ಠಾಣೆಯಿಂದ ನಮ್ಮ ಇಲಾಖಾ ಜೀಪಿನಲ್ಲಿ ಇಬ್ಬರ ಪಂಚರು (ಚಾಸಾ.2 ಮತ್ತು ಚಾಸಾ.3), ಪೋಲೀಸ್ ಸಿಬ್ಬಂದಿಗಳಾದ ಚಾಸಾ.8 ಮತ್ತು ಚಾಸಾ.9 ರವರೊಂದಿಗೆ, ಪರಿಕರಗಳೊಂದಿಗೆ ಹಾಗೂ ಚಾಸಾ.4 ರವರ ಇಲಾಖಾ ವಾಹನದಲ್ಲಿ ಅವರೊಂದಿಗೆ ಸಿಬ್ಬಂದಿಯವರಾದ ಚಾಸಾ.5 ರಿಂದ ಚಾಸಾ.7 ರವರೊಂದಿಗೆ ಠಾಣೆಯಿಂದ ಹೊರಟೆವು.

5. ಮಧ್ಯಾಹ್ನ 03.15 ಗಂಟೆಗೆ ಮಾಹಿತಿ ಇದ್ದ ಸ್ಥಳಕ್ಕೆ ಹೋಗಿದ್ದು, ಸದರಿ ಕಮಾನಿನ ಸುಮಾರು 150 ಮೀಟರ್ ದೂರದಲ್ಲಿ ಮರೆಯಲ್ಲಿ ನಿಂತು ನಾವುಗಳು

ಪಂಚರ ಸಮಕ್ಷಮ ಪರಸ್ಪರ ಅಂಗಶೋಧನೆ ಮಾಡಿಕೊಂಡೆವು. ನಮ್ಮ ಬಳಿ ಗಾಂಜಾಕ್ಕೆ ಸಂಬಂಧಿಸಿದಂತೆ ಯಾವುದೇ ವಸ್ತುಗಳು ಇಲ್ಲ ಎಂದು ಖಚಿತ ಪಡಿಸಿಕೊಂಡಿರುತ್ತೇವೆ.

6. ದೂರದಲ್ಲಿ ನಿಂತು ನೋಡಲಾಗಿ ಕಮಾನಿನ ಹತ್ತಿರ ಇಬ್ಬರು ವ್ಯಕ್ತಿಗಳು ನಿಂತಿತ್ತು, ಅದರಲ್ಲಿ ಒಬ್ಬ ಬ್ಯಾಗ್ ಹಿಡಿದುಕೊಂಡು ನಿಂತಿದ್ದು, ಸಿಬ್ಬಂದಿಯವರ ಸಹಾಯದಿಂದ ದಾಳಿ ಮಾಡಿದ್ದು, ಇಬ್ಬರು ವ್ಯಕ್ತಿಗಳನ್ನು ಹಿಡಿದು ಅವರುಗಳನ್ನು ವಿಚಾರ ಮಾಡಿಲಾಗಿ ಒಬ್ಬನ ಹೆಸರು ರವಿಶೆಟ್ಟಿ (1 ನೇ ಆರೋಪಿ) ಮತ್ತು ಇನ್ನೊಬ್ಬನ ಹೆಸರು ಕೇಳಲಾಗಿ ಅಬ್ದುಲ್ ಅಶೀಶ್ (2 ನೇ ಆರೋಪಿ) ಎಂದು ತಿಳಿಯಿತು.

7. 1 ನೇ ಆರೋಪಿತನ ಹತ್ತಿರ ಪಾಚಿ ಕಲರ್ ನ ಬ್ಯಾಗ್ ಇದ್ದು, ಸದರಿ ಬ್ಯಾಗ್ ಬಗ್ಗೆ ವಿಚಾರಿಸಿದಾಗ 1 ನೇ ಆರೋಪಿಯು ಸದರಿ ಬ್ಯಾಗಿನಲ್ಲಿ ಗಾಂಜಾ ಇದ್ದು, ಸದರಿ ಗಾಂಜಾವನ್ನು ಆಂಧ್ರಪ್ರದೇಶದ ವೈಜಾಕ್ ನಿಂದ ತಂದಿದ್ದು, ಸದರಿ ಗಾಂಜಾವನ್ನು ಪಾಲಿಥಿನ್ ಕವರಿಗೆ ಹಾಕಿ ಪ್ಯಾಕೆಟ್ ಗಳನ್ನಾಗಿ ಮಾಡಿ ಒಂದೊಂದು ಪ್ಯಾಕೆಟ್ ಗಳನ್ನು ಸುಮಾರು 200 ರಿಂದ 400 ರೂಪಾಯಿಗಳವರೆಗೆ ಮಾರಾಟ ಮಾಡಿ ಹಣಗಳಿಸಲು ತಂದಿರುವುದಾಗಿ ತಿಳಿಸಿರುತ್ತಾರೆ.

8. ಪಂಚರ ಸಮಕ್ಷಮ ಸದರಿ ಬ್ಯಾಗನ್ನು ಪರಿಶೀಲಿಸಲಾಗಿ, ಬ್ಯಾಗನಲ್ಲಿ ಬ್ರೌನ್ ಟೇಪಿನಿಂದ ಸುತ್ತಿದ 6 ಬಂಡಲ್ ಗಳು ಇದ್ದು, ಅದರಲ್ಲಿ ಒಂದು ಬಂಡಲ್ ತೆರೆದಿದ್ದು, ಅದನ್ನು ನೋಡಲಾಗಿ ಅದರಲ್ಲಿ ಗಾಂಜಾ ಇದ್ದು, ಹೂವು, ಮೊಗ್ಗಿನಿಂದ ಕೂಡಿದ ಘಾಟುವಾಸನೆಯಿಂದ ಕೂಡಿದ ಗಾಂಜಾ ಎಂದು ಮೇಲ್ನೋಟಕ್ಕೆ ಕಂಡು ಬಂತು.

9. ನಂತರ ಉಳಿದ 5 ಬಂಡಲ್ ಗಳನ್ನು ತೆರೆಯಿಸಿ ನೋಡಲಾಗಿ ಅವುಗಳಲ್ಲಿಯೂ ಗಾಂಜಾ ಇರುವುದು ಕಂಡು ಬಂತು. ಸದರಿ ಬಂಡಲ್ ನಲ್ಲಿದ್ದ ಗಾಂಜಾವನ್ನು ಚಾಸಾ.6 ರವರ ಮುಖಾಂತರ ಪಂಚರ ಸಮಕ್ಷಮ ವಿದ್ಯುತ್ ತೂಕದ ಯಂತ್ರದ ಮುಖಾಂತರ ತೂಕ ಮಾಡಿಸಲಾಗಿ ಕ್ರಮವಾಗಿ 2 ಕೆ.ಜಿ 230 ಗ್ರಾಂ, 2 ಕೆ.ಜಿ 248 ಗ್ರಾಂ, 2 ಕೆ.ಜಿ 232 ಗ್ರಾಂ, 2 ಕೆ.ಜಿ 122 ಗ್ರಾಂ, 2 ಕೆ.ಜಿ 208 ಗ್ರಾಂ ಮತ್ತು 122 ಗ್ರಾಂ ಗಾಂಜಾ ಇದ್ದು, ಸದರಿ ಬಂಡಲ್ ಗಳಿಗೆ ಕ್ರಮ ಸಂಖ್ಯೆ.1 ರಿಂದ 6 ಎಂದು ಕ್ರಮವಾಗಿ ಗುರುತಿಸಿರುತ್ತೇವೆ. ಅವುಗಳ ಒಟ್ಟು ತೂಕ 11 ಕೆ.ಜಿ 162 ಗ್ರಾಂ ಇರುತ್ತದೆ.

10. ನಂತರ 1 ಮತ್ತು 2 ನೇ ಆರೋಪಿತರಿಗೆ ಅಂಗಶೋದನಯನ್ನು ಪತ್ರಾಂಕಿತ ಅಧಿಕಾರಿಯ ಮುಂದೆ ಅಥವಾ ನ್ಯಾಯಾಧೀಶರ ಮುಂದೆ ಮಾಡಬೇಕೋ ಎಂದು ಕೇಳಿ, ಆರೋಪಿತರಿಗೆ ಲಿಖಿತ ನೋಟಿಸನ್ನು ಜಾರಿ ಮಾಡಲಾಯಿತು. ಸದರಿ ನೋಟೀಸುಗಳನ್ನು <u>ನಿಪಿ.**6**</u> ಮತ್ತು <u>ನಿಪಿ.**7**</u> ಎಂದು ಕ್ರಮವಾಗಿ ಗುರುತಿಸಲಾಯಿತು. 1 ಮತ್ತು 2 ನೇ ಆರೋಪಿತರು ನೀಡಿರುವ ಸಮ್ಮತಿಯನ್ನು <u>ನಿಪಿ.**8**</u> ಮತ್ತು <u>ನಿಪಿ.**9**</u> ಎಂದು ಗುರುತಿಸಲಾಯಿತು.

11. ನಂತರ ಪತ್ರಾಂಕಿತ ಅಧಿಕಾರಿ ಮತ್ತು ಪಂಚರ ಸಮಕ್ಷಮ 1 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ ಆತನ ಪ್ಯಾಂಟಿನ ಬಲ ಜೇಬಿನಲ್ಲಿ ರೂ.500 ಮುಖಬೆಲೆಯ ಒಂದು ನೋಟು ಮತ್ತು 25 ಸಣ್ಣ ಪಾಲಿಥಿನ್ ಕವರುಗಳು ಇದ್ದವು. 2 ನೇ ಆರೋಪಿಯ ಅಂಗಶೋಧನೆ ಮಾಡಲಾಗಿ ಆತನ ಪ್ಯಾಂಟಿನ ಬಲ ಜೇಬಿನಲ್ಲಿ ರೂ.200 ಮುಖ

ಬೆಲೆಯ 1 ನೋಟು ಹಾಗೂ ರೂ.100 ಮುಖಬೆಲೆಯ ಒಂದು ನೋಟು ಹಾಗೂ 20 ಸಣ್ಣ ಪಾಲಿಥಿನ್ ಕವರ್ ಗಳು ಇದ್ದವು.

12. ನಂತರ ಇವುಗಳನ್ನು ಪಂಚರು ಮತ್ತು ಪತ್ರಾಂಕಿತ ಅಧಿಕಾರಿಯ ಸಮಕ್ಷಮ ಪ್ರತಿ ಬಂಡಲ್ ನಿಂದ ತಲಾ 50 ಗ್ರಾಂ ಗಾಂಜಾವನ್ನು ಸ್ಯಾಂಪಲ್ ಗಾಗಿ ಪ್ರತ್ಯೇಕವಾಗಿ ತೆಗೆದು, ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ಸೀಲ್ ಹಾಗೂ ಸಹಿ ಮಾಡಿದ ಚೀಟಿಗಳನ್ನು ಅಂಟಿಸಿದ್ದು, ನಂತರ ಒಟ್ಟು 6 ಬಂಡಲ್ ಗಳು ಹಾಗೂ ಪ್ರತ್ಯೇಕವಾಗಿ ಎಫ್ ಎಸ್ ಎಲ್ ಗೆ ಕಳುಹಿಸಲು ತೆಗೆದಿಟ್ಟಿದ್ದ ಗಾಂಜಾವನ್ನು ಬಿಳಿ ಬಟ್ಟೆಯಿಂದ ಪ್ಯಾಕ್ ಮಾಡಿ ಸೀಲ್ ಮಾಡಲಾಯಿತು ಹಾಗೂ ಪಂಚರ ಸಹಿಗಳನ್ನು ಪಡೆಯಲಾಯಿತು.

13. ನಂತರ ಒಟ್ಟು ರೂ.800/- ಹಣ ಮತ್ತು 45 ಸಣ್ಣ ಪಾಲಿಥಿನ್ ಕವರ್ ಗಳು ಮತ್ತು ಒಂದು ಪಾಚಿ ಕಲರ್ ಬ್ಯಾಗ್ ಇವುಗಳನ್ನು ಒಟ್ಟುಗೂಡಿಸಿ ಪ್ಯಾಕ್ ಮಾಡಿರುತ್ತೇನೆ. ಹಾಗೂ ಈ ಬಗ್ಗೆ ಪಂಚನಾಮೆಯನ್ನು ಮಧ್ಯಾಹ್ನ 03.30 ಗಂಟೆಯಿಂದ ಮಧ್ಯಾಹ್ನ 05.30 ಗಂಟೆಯವರೆಗೆ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು <u>ನಿಪಿ.**10**</u> ಎಂದು, ಸಾಕ್ಷಿಯ ಸಹಿಯನ್ನು <u>ನಿಪಿ.**10(ಎ)**</u> ಎಂದು ಗುರುತಿಸಲಾಯಿತು. ನಿಪಿ.10 ರಲ್ಲಿ ಆರೋಪಿತರ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಸಹಿಗಳನ್ನು <u>ನಿಪಿ.**10(ಬಿ)**</u> ಮತ್ತು <u>ನಿಪಿ.**10(ಸಿ)**</u> ಎಂದು ಕ್ರಮವಾಗಿ ಗುರುತಿಸಲಾಯಿತು.

14. ನಿಪಿ.10 ರ ಪಂಚನಾಮೆ ಸಮಯದಲ್ಲಿ ಒಟ್ಟು 10 ಪೊಟೋಗಳನ್ನು ತೆಗೆಸಿರುತ್ತೇನೆ. ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಕಚ್ಚಾ ನಕಾಶೆಯನ್ನು

<u>ನಿಪಿ.**11**</u> ಎಂದು ಗುರುತಿಸಲಾಯಿತು. ಸದರಿ 10 ಪೋಟೋವನ್ನು <u>ನಿಪಿ.**12**</u> ರಿಂದ <u>ನಿಪಿ.**21**</u> ಎಂದು ಗುರುತಿಸಲಾಯಿತು.

15. ನಿಪಿ.12 ಮತ್ತು ನಿಪಿ.13 ರ ಪೋಟೋಗಳಲ್ಲಿ ಆರೋಪಿತರು ಮತ್ತು ಗಾಂಜಾ ಜಪ್ತು ಪಡಿಸಿಕೊಂಡಿರುವುದು, ಹಾಗೂ ಪಾಚಿ ಕಲರ್ ನ ಬ್ಯಾಗು ಕಂಡು ಬರುತ್ತದೆ. ವಿಸಿ ಮೂಲಕ ಹಾಜರುಪಡಿಸಿದ 1 ಮತ್ತು 2 ನೇ ಆರೋಪಿತರನ್ನು ಸಾಕ್ಷಿಯು ವಿಸಿ ಮೂಲಕ ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ಮಾನ್ಯ ಪಿ.ಪಿ.ಯವರ ಕೋರಿಕೆಯ ಮೇರೆಗೆ ಮೊಹರು ಸುಸ್ಥಿತಿಯಲ್ಲಿರುವ ಆರು ಬಟ್ಟೆ ಚೀಲಗಳನ್ನು ತೆಗೆದ ನ್ಯಾಯಾಲಯದಲ್ಲಿ ತೆರೆಯಲಾಯಿತು.

16. ಸದರಿ ಆರು ಬಟ್ಟೆ ಚೀಲಗಳಲ್ಲಿ ಸ್ಯಾಂಪಲ್ ಗಾಗಿ ಘಟನಾ ಸ್ಥಳದಲ್ಲಿ ತೆಗೆದ ಗಾಂಜಾವನ್ನು ಮತ್ತು ಸದರಿ ಆರು ಪ್ಯಾಕುಗಳನ್ನು ಗಾಂಜಾ ಸಮೇತ (ಪಿ.ಎಫ್.ನಂ.46/2021 ರಲ್ಲಿ ನಮೂದಿಸಲಾಗಿದೆ) <u>ಎಂ.ಓ.**1**</u> ರಿಂದ <u>ಎಂ.ಓ.**6**</u> ಎಂದು ಗುರುತಿಸಲಾಯಿತು.

17. ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಪಾಚಿ ಕಲರ್ ಬ್ಯಾಗನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಬ್ಯಾಗನ್ನು <u>ಎಂ.ಓ.**7**</u> ಎಂದು ಗುರುತಿಸಲಾಯಿತು.

18. ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಸಣ್ಣ ಪಾಲಿಥಿನ್ ಕವರ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಸಣ್ಣ ಪಾಲಿಥಿನ್ ಕವರ್ ಗಳನ್ನು **ಎಂ.ಓ.8** ಎಂದು ಗುರುತಿಸಲಾಯಿತು.

19. ನ್ಯಾಯಾಲಯದಲ್ಲಿ ಹಾಜರುಪಡಿಸಿದ ರೂ.500/- ಮುಖಬೆಲೆಯ ಒಂದು ನೋಟನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ನೋಟನ್ನು **ಎಂ.ಓ.9** ಎಂದು ಗುರುತಿಸಲಾಯಿತು.

20. ನ್ಯಾಯಾಲಯದಲ್ಲಿ ಹಾಜರುಪಡಿಸಿದ ರೂ.200/- ಮುಖಬೆಲೆಯ ಒಂದು ನೋಟು ಮತ್ತು ರೂ.100 ಮುಖಬೆಲೆಯ ಒಂದು ನೋಟನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ನೋಟಗಳನ್ನು **ಎಂ.ಓ.10** ಮತ್ತು **ಎಂ.ಓ.11** ಎಂದು ಕ್ರಮವಾಗಿ ಗುರುತಿಸಲಾಯಿತು.

21. ನಂತರ ಇಬ್ಬರೂ ಆರೋಪಿತರು ಮತ್ತು ವಶಪಡಿಸಿಕೊಂಡ ಸ್ವತ್ತುಗಳೊಂದಿಗೆ ಸಿಇಎನ್ ಪೋಲೀಸ್ ಠಾಣೆಗೆ ಸಂಜೆ 05.30 ಗಂಟೆಗೆ ಬಂದು ಈ ಬಗ್ಗೆ ದೂರು ಪ್ರತಿ ತಯಾರಿಸಿ, ಮುಂದಿನ ಕ್ರಮಕ್ಕಾಗಿ ಠಾಣಾಧಿಕಾರಿಗೆ ನೀಡಿರುತ್ತೇನೆ. ಸದರಿ ದೂರನ್ನು **ನಿಪಿ.22** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.22(ಎ)** ಎಂದು ಗುರುತಿಸಲಾಯಿತು. ಸದರಿ ದೂರಿನೊಂದಿಗೆ ಆರೋಪಿತರು, ಮಾಲು ಮತ್ತು ಪಂಚನಾಮೆಯನ್ನು ಹಾಜರುಪಡಿಸಿರುತ್ತೇನೆ.

22. ಎಸ್.ಪಿ. ರವರು ನೀಡಿರುವ ಜ್ಞಾಪನಾ ಪತ್ರವನ್ನು <u>ನಿಪಿ.**23**</u> ಎಂದು ಗುರುತಿಸಲಾಯಿತು. ಸದರಿ ದಿನ ಬಂದ ಮಾಹಿತಿಯನ್ನು ನಾನು ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ಠಾಣಾ ದಿನಚರಿಯ (4 ಹಾಳೆಗಳನ್ನು) ನಕಲನ್ನು <u>ನಿಪಿ.**24**</u> ಎಂದು ಗುರುತಿಸಲಾಯಿತು.

23. ನಿಪಿ.12 ರಿಂದ ನಿಪಿ.21 ಎಂದು ಗುರುತಿಸಲಾದ ಪೊಟೋಗಳನ್ನು ಸಿಡಿಗೆ ಅಳವಡಿಸಿರುತ್ತೇನೆ.

ಈ ಹಂತದಲ್ಲಿ ನ್ಯಾಯಾಲಯದ ವೇಳೆಯಾಗಿದ್ದರಿಂದ, ಹಾಗೂ ಆರೋಪಿತರು ವಕೀಲರನ್ನು ಬದಲಾವಣೆ ಮಾಡಿಕೊಳ್ಳುತ್ತೇನೆಂದು ಹೇಳಿದ್ದರಿಂದ, ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.